UASB Library
Newspaper Clippings
Monday 03-03-2025
Pg .1
Jai Kisan

ಕ್ವಿಂಟಾಲ್‌ಗೆ 5,940 ರೂ. ದರ ನಿಗದಿ

ಬೆಂಬಲ ಬೆಲೆಯಲ್ಲಿ ಕುಸುಬೆ ಖರೀದಿ: ಶಿವಾನಂದ ಪಾಟೀಲ್

ಬೆಂಗಳೂರು: ರಾಜ್ಯ ಸರಕಾರದ ಮನವಿ ಮೇರೆಗೆ ಕೇಂದ್ರ ಸರಕಾರವು ಕುಸುಬೆ ಗದಗ, ಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಸಮ್ಮತಿಸಿದ್ದು, ಕ್ವಿಂಟಾಲ್‌ಗೆ 5,940 ರೂ. ನಿಗದಿಪಡಿಸಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಹೇಳಿದ್ದಾರೆ.



ಮಾರುಕಟ್ಟೆಯಲ್ಲಿ ಕುಸುಬೆ ಬೆಲೆ ಕುಸಿದಿರುವ ಕಾರಣ ಬೆಂಬಲ ಬೆಲೆಯಲ್ಲಿ ಖರೀದಿಸುವಂತೆ ರಾಜ್ಯ ಸರಕಾರವು ಪ್ರಸ್ತಾವ ಸಲ್ಲಿಸಿತ್ತು. ಅದಕ್ಕೆ ಕೇಂದ್ರ ಸರಕಾರವು ಅನುಮೋದನೆ ನೀಡಿದ್ದು, ಸಂಬಂಧಪಟ್ಟವರಿಗೆ ಖರೀದಿ ಪ್ರಕ್ರಿಯೆ ಆರಂಭಿಸಲು ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಬೀದರ್, ಧಾರವಾಡ, ದಾವಣಗೆರೆ, ವಿಜಯಪುರ, ಕಲಬುರಗಿ, ಚಿತ್ರದುರ್ಗ, ಕೊಪ್ಪಳ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕುಸುಬೆ ಬೆಳೆಯಲಾಗುತ್ತಿದೆ. ಜನವರಿಯಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಕಟಾವು ಪ್ರಕ್ರಿಯೆ ನಡೆಯಲಿದ್ದು, ಫೆಬ್ರವರಿಯಿಂದ ಏಪ್ರಿಲ್‌ವರೆಗಿನ ಅವಧಿಯಲ್ಲಿ ಮಾರುಕಟ್ಟೆಗೆ ಅಧಿಕ ಪ್ರಮಾಣದಲ್ಲಿ ಆವಕವಾಗಲಿದೆ.

ರೈತರು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡದೆ ಬೆಂಬಲ ಬೆಲೆ ಖರೀದಿ ಕೇಂದ್ರಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

03-03-2025
Vijaya Kar. Pg. 03

ಸಂಯುಕ್ತ ಕರ್ನಾಟಕ ಬೆಂಗಳೂರು

ಸತತ ಎರಡು ವರ್ಷ ಮಾವು ಫಸಲು ನಷ್ಟ | ಅಧಿಕಾರಿಗಳಿಂದ ಬೆಳೆ ಸಂರಕ್ಷಣೆಗೆ ಕ್ರಮ

ಮಾವು ಏಪ್ರಿಲ್‌ನಲ್ಲೇ ಮಾರುಕಟ್ಟೆಗೆ

ಸಂ.ಕ. ಸಮಾಚಾರ, ರಾಮನಗರ

ಹವಾಮಾನ ವೈಪರಿತ್ಯ, ಅಕಾಲಿಕ ಮಳೆ, ಕೀಟ ಬಾಧೆಯಿಂದಾಗಿ ಜಿಲ್ಲೆಯ ಮಾವು ಫಸಲು ನೆಲಕಚ್ಚಿತ್ತು. ಜತೆಗೆ, ತಡವಾಗಿ ಮಾರುಕಟ್ಟೆಗೆ ಆಗಮಿಸಲಿದೆ ಎಂದು ಎಲ್ಲರೂ ಅಂದಾಜಿಸಿದ್ದರು. ಆದರೆ, ಎಲ್ಲರ ಲೆಕ್ಕಾಚಾರ ಉಲ್ಟಾ ಮಾಡಿರುವ ಮಾವು ಫಸಲು ಎಂದಿನಂತೆ ಏಪ್ರಿಲ್ ಮೊದಲ ವಾರದಲ್ಲಿ ಮಾರುಕಟ್ಟೆ ಪ್ರವೇಶಿಸಲಿದೆ.

ರಾಜ್ಯದ ಬೇರೆ ಜಿಲ್ಲೆಯ ಮಾವು ಮಾರುಕಟ್ಟೆಗೆ ಪ್ರವೇಶಿಸುವುದರಲ್ಲಿ ರಾಮನಗರ ಜಿಲ್ಲೆಯಲ್ಲಿ ಮಾವು ಮಾರಾಟ ಸಂಪೂರ್ಣ ಮುಕ್ತಾಯದ ಹಂತದಲ್ಲಿರುತ್ತದೆ.

ಕಳೆದ ಎರಡು ವರ್ಷ ಜಿಲ್ಲೆಯಲ್ಲಿ ಸತತ ಮಾವು ಫಸಲು ನಷ್ಟ ಉಂಟಾಗಿತ್ತು. ಇದನ್ನು ಗಮನದಲ್ಲಿಟ್ಟುಕೊಂಡಿದ್ದ ಜಿಲ್ಲೆಯ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಕಳೆದ ಗತಾಯ ಮಾವು ಬೆಳೆ ಸಂರಕ್ಷಣೆ ಮಾಡಲು ಮುಂದಾಗಿದ್ದರು. ಇದರ ನಡುವೆ ವಿರ್ಪಟ್ಟದ್ದ ಹವಾಮಾನ ವೈಪರಿತ್ಯ ಹಾಗೂ ಕೀಟಬಾಧೆಯು ಮತ್ತಷ್ಟು ತಲೆ ಬಿಸಿಯನ್ನುಂಟು ಮಾಡಿತ್ತು. ಆದರೆ, ತೋಟದಲ್ಲಿ ಹೂ ಉಳಿಸಿಕೊಳ್ಳಲು ಹಾಗೂ ಕೀಟಬಾಧೆಯಿಂದ ದೂರವಾಗಲು ಜಿಲ್ಲಾ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸಾಕಷ್ಟು ಕ್ರಮ ಕೈಗೊಂಡಿದ್ದರು.

ಎಲ್ಲರ ಶ್ರಮ ಹಾಗೂ ಬೆಳೆಗಾರ



ಮುತುವರ್ಜಿಯಿಂದಾಗಿ ಜಿಲ್ಲೆಯಲ್ಲಿ ಮಾವು ಫಸಲು ಉಳಿದುಕೊಂಡಿದೆ.

ರಾಮನಗರ ಜಿಲ್ಲೆಯಲ್ಲಿ ಒಟ್ಟು 32 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಏಪ್ರಿಲ್ ಮೊದಲ ವಾರದಲ್ಲಿ ಮಾವು ಮಾರಾಟ ಆರಂಭವಾದರೆ ಮೇ ತಿಂಗಳ ಕೊನೆ ಅಥವಾ ಜೂನ್ ಮೊದಲ ವಾರದಲ್ಲಿ ಮಾವು ಮಾರಾಟ ಕೊನೆಯಾಗಲಿದೆ. ಜಿಲ್ಲೆಯ ಮಾವು ದೇಶದ ವಿವಿಧ ಭಾಗಗಳು ಸೇರಿದಂತೆ ವಿದೇಶಕ್ಕೂ ರಫ್ತು ಆಗಲಿದೆ. ಇಲಾಖೆ ವತಿಯಿಂದ ನೈಸರ್ಗಿಕವಾಗಿ ಹಣ್ಣು ಮಾಡುವುದಕ್ಕೆ ರೈತರಿಗೆ ಸಬ್ಸಿಡಿ ದರದಲ್ಲಿ ಘಟಕ ನಿರ್ಮಾಣಕ್ಕೆ ಹಣ ನೀಡಲಾಗುತ್ತದೆ ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ರಾಜು ತಿಳಿಸಿದ್ದಾರೆ.

ಬಿಸಿಲ ಝಳದಿಂದ ಆತಂಕ

ಜಿಲ್ಲೆಯಲ್ಲಿ ಬೇಸಿಗೆ ಆರಂಭಕ್ಕೂ ಮುನ್ನ ತಾಪಮಾನ ಹೆಚ್ಚಾಗಿದೆ. ಮುಂದಿನ ದಿನದಲ್ಲಿ ಮತ್ತಷ್ಟು ಹೆಚ್ಚಾಗುವ ಎಲ್ಲಾ ಲಕ್ಷಣಗಳಿವೆ. ಪ್ರಸ್ತುತ ಈ ವಾತಾವರಣವೂ ಮಾವು ಬೆಳೆಗೆ ಮತ್ತಷ್ಟು ಸಂಕಷ್ಟ ಎದುರಿಸುವಂತೆ ಮಾಡಲಿದೆ ಎಂಬುದು ಅಧಿಕಾರಿಗಳ ಅಭಿಪ್ರಾಯ. ಈ ಬಿಸಿಲ ಝಳದಿಂದ ಬೆಳೆಗಾರರು ಫಸಲು ರಕ್ಷಿಸಿಕೊಂಡರೆ ಉತ್ತಮ ಇಳುವರಿ ನಿರೀಕ್ಷೆ ಮಾಡಬಹುದಾಗಿದೆ.

03-03-2025
Samyuktha Kar. Pg. 04

ಬಿಸಿಲಿನ ಬೇಗೆ-ಕೈಗೆಟುಕದ ಎಳನೀರು

ಸಂಕ ಸಮಾಚಾರ, ಬೆಂಗಳೂರು

ರಾಜ್ಯದಲ್ಲಿ ಒಂದೆಡೆ ಬಿಸಿಲು ಏರುತ್ತಿದೆ. ಶಿವರಾತ್ರಿ ಕಳೆಯುತ್ತಿದ್ದಂತೆ ನೆತ್ತಿ ಸುಡುವ ಬಿಸಿಲಿಗೆ ಶಿವ, ಶಿವ ಬಿಸಿಲು ಎಂದು ಜಪ ಮಾಡುವ ಸ್ಥಿತಿ ಬಂದಿದೆ ಬಿಸಿಲಿನ ಧಗೆಯಿಂದ ಪಾರಾಗಲು ಜನರು ಎಳನೀರಿಗೆ ಮುಗಿಬಿದ್ದಿದ್ದಾರೆ. ಆದರೆ ಎಳನೀರಿನ ದರ ಮಾತ್ರ ನಿರೀಕ್ಷೆಗೂ ಮೀರಿ ತುಟ್ಟಿಯಾಗಿಸಿದೆ.



30 ರೂ.ದಿಂದ 60 ರೂ ಏರಿಕೆ

ಕಳೆದ ತಿಂಗಳು 40 ರೂಗೆ ಒಂದರಂತೆ ಇದ್ದ ಎಳನೀರು ಇದೀಗ 60 ರೂ ತಲುಪಿದೆ. ಮನೆಯಲ್ಲಿನ ನೀರು ಹೆಚ್ಚುತ್ತಿರುವ ದಾಹವನ್ನು ತಣಿಸುವುದಿಲ್ಲ. ಹೀಗಾಗಿ ಏನಿದ್ದರೂ ಎಳನೀರೇ ಕುಡಿಯಬೇಕು ಎಂಬ ನಿರ್ಧಾರಕ್ಕೆ ಬಂದಿರುವ ಜನರು ಬಯ್ದುಕೊಳ್ಳುತ್ತ ಎಳನೀರು ಕುಡಿಯುತ್ತಿದ್ದಾರೆ. ಪರಿಸ್ಥಿತಿಯನ್ನು ಅರಿತ ತೆಂಗಿನ ತೋಟದ ಮಾಲಿಕರೂ ಸಹ ಎಳನೀರಿನ ದರವನ್ನು ಏರಿಸಿದ್ದಾರೆ. ಅವರಿಂದ ಕೊಂಡು ಕಂದು ಮಾರುವವರೂ ಸಹ ಹೆಚ್ಚಿನ ಲಾಭ ಪಡೆಯಲು ದರವನ್ನು ಏರಿಸಿದ್ದಾರೆ. ಈಗಲೇ ಹೀಗಾದರೆ ಮುಂದಿನ ಇನ್ನೆರಡು ತಿಂಗಳು ಭರ್ತಿ ಬೇಸಿಗೆಯಲ್ಲಿ ಎಳನೀರಿನ ದರ ಇನ್ನೂ ಹೆಚ್ಚಾಗುವ ಸಂಭವ ಹೆಚ್ಚಿದೆ.

ಮಾರುಕಟ್ಟೆಯಲ್ಲಿ ಒಂದು ಎಳನೀರು 30 ರೂ.ಗೆ ಸಿಕ್ಕರೂ ಸಹ ಸಾಗಾಟ, ಕೊಯ್ದು ಮಾಡುವುದು, ಕೂಲಿ ಎಲ್ಲಾ ಸೇರಿ ಬೆಂಗಳೂರಿಗೆ ಬರುವಷ್ಟರಲ್ಲಿ 60 ರೂ. ಆಗುತ್ತಿದ್ದು ಇದರಲ್ಲಿ ರೈತರಿಗೆ ಸಿಗುವ ಲಾಭ ಅಷ್ಟಕ್ಕಷ್ಟೆ. ಇಲ್ಲಿ ವ್ಯಾಪಾರಿಗಳಿಗೆ ಲಾಭ ಗ್ರಾಹಕರ ಬೆಲೆ ಬಿಸಿತಟ್ಟಿದೆ. ಮೇ ಅಂತ್ಯದವರೆಗೂ ರಾಜ್ಯದಲ್ಲಿ ಗರಿಷ್ಠ ಹಾಗೂ ಕನಿಷ್ಠ ತಾಪಮಾನವು ವಾಡಿಕೆಗಿಂತ ಹೆಚ್ಚಿರಲಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದು, ಜನರು ಆರೋಗ್ಯದತ್ತ ಗಮನ ಹರಿಸುವುದು ಸೂಕ್ತ ಎಂದು ಸಲಹೆ ನೀಡಿದ್ದಾರೆ

ನಿರೀಕ್ಷಿಸಿದ ಫಸಲು ಇಲ್ಲ...

ಈ ಬಾರಿಯೂ ಸಹ ನಿರೀಕ್ಷಿಸಿದಷ್ಟು ತೆಂಗು ಫಲನೀಡುತ್ತಿಲ್ಲ. ಹವಾಮಾನ್ಯ ವೈಪರೀತ್ಯ, ಅಡ್ಡಮಳೆ, ವಾಡಿಕೆಗಿಂತ ಮೊದಲೇ ಉರಿಬಿಸಿಲು, ಇವೆಲ್ಲ ಕಾರಣಗಳಿಂದಾಗಿ ಎಳನೀರು ಬೆಳೆಯುತ್ತಿಲ್ಲ. ಮರಗಳಲ್ಲಿ ಫಸಲು ಬಂದಿಲ್ಲ. ಜತೆಗೆ ರೋಗಬಾಧೆಯೂ ತಲುಪಿರುವುದರಿಂದ ಇಳುವರಿ ಕುಂಠಿತವಾಗಿದೆ.

03-03-2025
Samyuktha Kar. Pg. 05

ಕುಸಿತ ಕೇಜಿಗೆ ₹270 ಇದ್ದ ಮಾಂಸ ₹200ಕ್ಕೆ ಇಳಿಕೆ

ಹಕ್ಕಿಜ್ವರ ಭೀತಿಯಿಂದ ಚಿಕನ್ ಖರೀದಿಗೆ ಗ್ರಾಹಕರ ಹಿಂದೇಟು



• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ಹಕ್ಕಿ ಜ್ವರದ ಭೀತಿ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಈಗಾಗಲೇ ಚಿಕ್ಕಬಳ್ಳಾಪುರ ತಾಲೂಕಿನ ವರದಹಳ್ಳಿಯಲ್ಲಿ ನೂರಾರು ಕೋಳಿಗಳ ಮಾರಣಹೋಮ ಮಾಡಲಾಗಿದೆ. ಜಿಲ್ಲೆಯ ಎಲ್ಲ ತಾಲೂಕು ಸೇರಿ ಎಲ್ಲಡೆ ಹಕ್ಕಿ ಜ್ವರದ ಭೀತಿಯಿಂದ ಕೋಳಿ ಮಾರಾಟದ ಮೇಲೆ ತೀವ್ರ ಪರಿಣಾಮ ಬೀರಿದೆ. ಆರೋಗ್ಯದ ಕಾಳಜಿಯಿಂದಾಗಿ ಜನರು ಕೋಳಿ ಮಾಂಸ ಖರೀದಿಗೆ ಹಿಂದೇಟು ಹಾಕಿದ್ದಾರೆ.

ದರ ದಿಢೀರ್ ಕುಸಿತ: ಕೋಳಿ ಮಾಂಸಕ್ಕೆ ಬೇಡಿಕೆ ಕಡಿಮೆ ಆಗುತ್ತಿದ್ದಂತೆಯೇ ಬೆಲೆ ಕೂಡಾ ದಿಢೀರ್ ಕುಸಿತವಾಗಿದೆ. ಜನರು ಮೀನು ಸೇರಿ ಇತರ ಬದಲಿ ಮಾಂಸಗಳನ್ನು ಖರೀಸುತ್ತಿದ್ದು, ಕೋಳಿ ಮಾಂಸ ಮಾರಾಟಗಾರರಿಗೆ ಭಾರಿ ನಷ್ಟ ಉಂಟಾಗಿದೆ. ನಗರದ ಕೋಳಿ ಮಾರಾಟಗಾರ ಷರೀಫ್ ಪ್ರತಿಕ್ರಿಯೆ ನೀಡಿ, ಶಂಕಿತ ವೈರಸ್‌ನಿಂದ ಕೋಳಿ ಸಾವು ವರದಿಯಾದ ನಂತರ ಮಾರಾಟ ಶೇ.40ರಿಂದ 50ರಷ್ಟು ಕುಸಿದಿದೆ ಎಂದರು. ಸದ್ಯ ಕೋಳಿ ಬೆಲೆಯಲ್ಲಿ ತೀವ್ರ ಕುಸಿತವಾಗಿದೆ. ಬಾಯ್ಲರ್‌ಕೋಳಿ ಬೆಲೆ ಕೇಜಿಗೆ ₹270ಗಳಿಂದ ₹200ಕ್ಕೆ ಇಳಿದಿದೆ. ಆದರೂ ಮಾರಾಟ ಕಡಿಮೆಯಾಗಿದೆ. ಗ್ರಾಮಾಂತರದಲ್ಲಿ ಬೆಲೆ ಪ್ರತಿ ಕೇಜಿಗೆ ₹240 ರಿಂದ ₹180ಕ್ಕೆ ಇಳಿದಿವೆ. ನಾಟಿ ಕೋಳಿಗಳನ್ನಂತೂ ಕೇಳುವವರೇ ಇಲ್ಲದಂತಾಗಿದೆ.

03-03-2025
Kannada Prabha. Pg. 06

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » BENGALURU
ಸೋಮವಾರ 3 ಮಾರ್ಚ್ 2025
3 MARCH 2025
7 c

ಸಮಸ್ತ ಕರ್ನಾಟಕ ರೈತ ಮಿತ್ರ



■ನಿಂಬೆ ಗಿಡಗಳ ಆರೈಕೆ ಮಾಡುವುದು ಹೇಗೆ?

| ಅವಿನಾಶ್ ಮಳವಳ್ಳಿ

ನಿಂಬೆ ಗಿಡಗಳನ್ನು ನಾಟಿ ಮಾಡಿದ ಕೂಡಲೇ ಕೋಲನ್ನು ಆಸರೆಗಾಗಿ ಕಟ್ಟಬೇಕು. ಒಂದು ವರ್ಷ ಬೆಳೆದ ಗಿಡಗಳನ್ನು ನೆಲದಿಂದ 3-4 ಅಡಿ ಎತ್ತರದಲ್ಲಿ ಕತ್ತರಿಸಿ, 4-5 ಬಲಿಷ್ಠ ಕೊಂಬೆಗಳನ್ನು ಎಲ್ಲ ದಿಕ್ಕುಗಳಲ್ಲಿ ಬೆಳೆಯುವಂತೆ ಬಿಡಬೇಕು. ಇದರಿಂದ 3 ವರ್ಷದಲ್ಲಿ ಗಿಡಗಳು ಸೂಕ್ತ ಆಕಾರ ಪಡೆಯುತ್ತವೆ. ಇಳುವರಿ ಕೊಡುವ ಮರಗಳಲ್ಲಿ ಒಣಗಿದ, ಸತ್ತು ಹೋದ, ಬಿರುಕಾದ, ಅಡ್ಡಾದಿಡ್ಡಿ ಬೆಳೆದ ಹಾಗೂ ರೋಗ, ಕೀಟ ದಾಳಿಗೆ ತುತ್ತಾದ ರೆಂಬೆಗಳನ್ನು ಆಗಾಗ ಕತ್ತರಿಸಿ ತೆಗೆಯಬೇಕು. ಗಿಡದ ಸುತ್ತಲೂ ಮಣ್ಣನ್ನು ಸಡಿಲಗೊಳಿಸಿ ಪಾತಿಗಳಲ್ಲಿ ಹೊದಿಕೆ ಹಾಕಿ ನಿಯಮಿತವಾಗಿ ಪಾತಿಗಳಲ್ಲಿನ ಕಳೆ ನಿಯಂತ್ರಿಸುತ್ತಿರಬೇಕು. ಜೂನ್ ತಿಂಗಳಲ್ಲಿ ಶಿಫಾರಸು ಮಾಡಿದ ಪೂರ್ಣ ಪ್ರಮಾಣದ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಒದಗಿಸಬೇಕು. ರಸಗೊಬ್ಬರಗಳನ್ನು ಮೂರು ಸಮ ಕಂತುಗಳಲ್ಲಿ ಹೊಸ ಬೆಳವಣಿಗೆಯ ಸಮಯದಲ್ಲಿ ಅಂದರೆ ಮಾರ್ಚ್-ಏಪ್ರಿಲ್, ಜೂನ್-ಜುಲೈ (ಮಳೆಗಾಲಕ್ಕೆ ಮುಂಚೆ) ಮತ್ತು ಸೆಪ್ಟೆಂಬರ್-ಅಕ್ಟೋಬರ್ (ಮಳೆಗಾಲದ ನಂತರ) ತಿಂಗಳಲ್ಲಿ ಒದಗಿಸಬೇಕು. ಮಣ್ಣು ಮತ್ತು ಹವಾಗುಣಕ್ಕನುಗುಣವಾಗಿ 7-10 ದಿನಗಳಿಗೊಮ್ಮೆ ನೀರು ಹಾಯಿಸಬೇಕು ಅಥವಾ ಹನಿ ನೀರಾವರಿ ಪದ್ಧತಿ ಅಳವಡಿಸಿ ಪ್ರತಿ ಗಿಡಕ್ಕೆ 20ರಿಂದ 30 ಲೀ. ನೀರು ಒದಗಿಸಿದರೆ ಉತ್ತಮ ಇಳುವರಿ ಪಡೆಯಬಹುದು. **ಸೂಚನೆ:** ಗಿಡದ ರೆಂಬೆ ಕೊಂಬೆಗಳನ್ನು ಕತ್ತರಿಸಿದ ನಂತರ ತಾಮ್ರದ ಆಕ್ಸಿಕ್ಲೋರೈಡ್ ಅನ್ನು ಸಿಂಪಡಿಸತಕ್ಕದು.

| ಡಾ. ಎಂ. ಶಾಲಿನಿ ತೋಟಗಾರಿಕೆ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

vittasuggi@gmail.com

ವಿತ್ತವಾಣಿ

ಮನೆ ಮನೆಯ ಮನಿಮಾತು

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » BENGALURU
9 c
ಸೋಮವಾರ 3 ಮಾರ್ಚ್ 2025
3 MARCH 2025



ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಕೊಡುಗೆ ಅಪಾರ

ಬೆಳಗಾವಿಯಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯು ಹೊಸ-ಹೊಸ ಕಬ್ಬಿನ ತಳಿಗಳನ್ನು ಸಂಶೋಧನೆ ಮಾಡಿ, ಹೆಚ್ಚು ಸಕ್ಕರೆ ಇಳುವರಿ ಮತ್ತು ರೋಗನಿರೋಧಕ ಕಬ್ಬಿನ ತಳಿಗಳನ್ನು ರೈತರಿಗೆ ನೀಡುತ್ತಿದೆ. ಜತೆಗೆ ಸಕ್ಕರೆ ಕಾರ್ಖಾನೆ, ಎಥೆನಾಲ್ ಘಟಕಗಳಿಗೆ ಆತ್ಯಾಧುನಿಕ ತಂತ್ರಜ್ಞಾನಗಳ ಕುರಿತು ಕಾರ್ಮಿಕರಿಗೆ ವಿಶೇಷ ತಿಬಿರಗಳನ್ನು ಆಯೋಜಿಸಿ ತರಬೇತಿ ನೀಡುತ್ತಿದೆ. ಇದು ಮಾಜಿ ಸಿಎಂ ದಿ.ಎಸ್.ಎಂ.ಕೃಷ್ಣ ಅವರ ಸರ್ಕಾರದ ಕೊಡುಗೆಯಾಗಿದೆ. ಪ್ರಸಕ್ತ ಬಜೆಟ್‌ದಲ್ಲಿ ಸಕ್ಕರೆ ಇಲಾಖೆಗೆ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ 20 ಕೋಟಿ ರೂ. ಅನುದಾನ ನೀಡಬೇಕು ಎಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಲ್ಲಿ ಬಿಎಸ್ಸಿ ಮತ್ತು ಎಂಎಸ್ಸಿ ಓದುತ್ತಿರುವ ಪದವಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅನುಕೂಲವಾಗುವಂತೆ ಮತ್ತಷ್ಟು ಮೂಲಸೌಕರ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ ಎಂದು ಸಕ್ಕರೆ ಇಲಾಖೆ ಆಯುಕ್ತ ರವಿಕುಮಾರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ ಎಂದು ಸಿಎಂ ಕಚೇರಿ ಮೂಲಗಳು ತಿಳಿಸಿವೆ.

ದೇಶದಲ್ಲಿ ಕಬ್ಬಿನ ಕೊರತೆ ಸಕ್ಕರೆ ಉತ್ಪಾದನೆ ಕುಸಿತ

ಚಿರಪರಿಚಿತ

ಕಬ್ಬಿಗೆ ಯೋಗ್ಯ ದರ ನೀಡಬೇಕೆಂಬ ಬೆಳೆಗಾರರ ಹೋರಾಟ, ಸಕ್ಕರೆ ಉದ್ಯಮಿಗಳ ಹಠಮಾರಿ ಧೋರಣೆ, ಸರ್ಕಾರದ ಜಾಣ ಮೌನ, ಅನೇಕ ಸಮಸ್ಯೆ-ಸವಾಲುಗಳ ನಡುವೆ ದೇಶಾದ್ಯಂತ ಕಬ್ಬು ನುರಿಸುವ ಹಂಗಾಮು ಕೊನೆಯ ಹಂತದಲ್ಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಹಂಗಾಮಿನಲ್ಲಿ ದೇಶದ ಸಕ್ಕರೆ ಉತ್ಪಾದನೆಯಲ್ಲಿ ಶೇ.15.36 ಕುಸಿತವಾಗಿದೆ ಎಂದು ರಾಷ್ಟ್ರೀಯ ಸಹಕಾರ ಮಹಾಮಂಡಳಿ ನಿಯಮಿತ (NFCSFL)ದ ಮೂಲಗಳು ಹೇಳಿದೆ. ಪ್ರಸಕ್ತ ಹಂಗಾಮಿನಲ್ಲಿ 2025ರ ಫೆ.15ರ ವರದಿಯ ಪ್ರಕಾರ, ದೇಶಾದ್ಯಂತ 77 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವ ಕಾರ್ಯ ಸ್ಥಗಿತಗೊಳಿಸಿವೆ. ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕ ಮತ್ತು ದೇಶದ ವಿವಿಧ ರಾಜ್ಯಗಳ 454 ಕಾರ್ಖಾನೆಗಳು ಕಬ್ಬು ನುರಿಸುವ ಹಂಗಾಮ ಆರಂಭಿಸಿದ್ದವು. ಇಲ್ಲಿಯವರೆಗೆ 2,175.16 ಲಕ್ಷ ಟನ್ ಕಬ್ಬು ನುರಿಸಿ, 197.65 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ. ಇದೇ ಅವಧಿಯಲ್ಲಿ ಕಳೆದ ವರ್ಷದ ಹಂಗಾಮಿನಲ್ಲಿ (2023-24) 505 ಕಾರ್ಖಾನೆಗಳು 2,277.37 ಲಕ್ಷ ಟನ್ ಕಬ್ಬು ನುರಿಸಿ, 224.75 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದ್ದವು. ಈ ಹಂಗಾಮಿನಲ್ಲಿ ದೇಶದ ಸರಾಸರಿ ಸಕ್ಕರೆ ಇಳುವರಿ ದರ (ಎಥೆನಾಲ್‌ಗಾಗಿ ವಿನ್ಯಾಸಿತವನ್ನು ಹೊರತುಪಡಿಸಿ) ಶೇ.9.09 ಆಗಿದ್ದು, ಹಿಂದಿನ ಹಂಗಾಮಿನಲ್ಲಿ ಶೇ. 9.87 ಇತ್ತು.

ರಾಜ್ಯವಾರು ಉತ್ಪಾದನೆ ವಿವರ: ಮಹಾರಾಷ್ಟ್ರದಲ್ಲಿ 170 ಸಕ್ಕರೆ ಕಾರ್ಖಾನೆಗಳು 740.22 ಲಕ್ಷ ಟನ್ ಕಬ್ಬು ನುರಿಸಿ, 68.10 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ. ಉತ್ತರ ಪ್ರದೇಶದಲ್ಲಿ ಈ ಹಂಗಾಮಿನಲ್ಲಿ ಹೆಚ್ಚು ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಿವೆ. ಒಟ್ಟು 121 ಕಾರ್ಖಾನೆಗಳು 680.11 ಲಕ್ಷ ಟನ್‌ಗಳ ಕಬ್ಬು ನುರಿಸಿ, 63.25 ಲಕ್ಷ ಟನ್‌ಗಳ ಸಕ್ಕರೆ ಉತ್ಪಾದಿಸಿವೆ. ಪ್ರಸ್ತುತ, 119 ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕದಲ್ಲಿ ಕಳೆದ ವರ್ಷದ ಹಂಗಾಮಿಗಿಂತ ಈ ಬಾರಿ ಐದು ಸಕ್ಕರೆ ಕಾರ್ಖಾನೆಗಳು ಹೆಚ್ಚು ಕಾರ್ಯನಿರ್ವಹಿಸಿವೆ. ಈ ಹಂಗಾಮಿನಲ್ಲಿ ರಾಜ್ಯಾದ್ಯಂತ 79 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುತ್ತಿದ್ದು, ಈ ಪೈಕಿ 34 ಕಾರ್ಖಾನೆಗಳು ಹಂಗಾಮ ಪೂರ್ಣಗೊಳಿಸಿವೆ. ಮಾರ್ಚ್‌ನಲ್ಲಿ ಬಹುತೇಕ ಎಲ್ಲವೂ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇಲ್ಲಿಯವರೆಗೆ (ಫೆ.15, 2025 ರವರೆಗೆ) ರಾಜ್ಯದಲ್ಲಿ 437.65 ಲಕ್ಷ ಟನ್ ಕಬ್ಬು ನುರಿಸಿ, 37.20 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿದೆ.

3765.26 ಕೋಟಿ ರೂ. ಬಿಲ್ ಬಾಕಿ

2024-25ರ ಕಬ್ಬು ನುರಿಸುವ ಹಂಗಾಮು ಆರಂಭವಾದ ಬಳಿಕ, ಇಲ್ಲಿಯವರೆಗೆ ಸಕ್ಕರೆ ಇಲಾಖೆ ಮೂಲಗಳ ಪ್ರಕಾರ ರಾಜ್ಯದಲ್ಲಿ (ಜನವರಿ 31, 2025ರವರೆಗೆ) ಎಲ್ಲ ಕಾರ್ಖಾನೆಗಳು ಎಫ್‌ಆರ್‌ಪಿ ಪ್ರಕಾರ 15072.18 ಕೋಟಿ ರೂ. ಮೌಲ್ಯದಷ್ಟು ಕಬ್ಬು ನುರಿಸಿದ್ದು, ಇಲ್ಲಿಯವರೆಗೆ ಶೇ.75ರಷ್ಟು ಒಟ್ಟು 11321.96 ಕೋಟಿ ರೂ.ಕಬ್ಬಿನ ಬಿಲ್ ಪಾವತಿಸಿವೆ. ಇನ್ನೂ 3765.26 ಕೋಟಿ ರೂ. ಬಿಲ್ ಬಾಕಿಯಿದ್ದು, ಕಬ್ಬು ನುರಿಸಿದ 15 ದಿನಗಳ ಒಳಗಾಗಿ ಬೆಳೆಗಾರರ ಖಾತೆಗೆ ಬಿಲ್ ಪಾವತಿ ಮಾಡಲೇಬೇಕು ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ್, ಸಕ್ಕರೆ ಕಾರ್ಖಾನೆ ಮಾಲೀಕರಿಗೆ ತಾಕೀತು ಮಾಡಿದ್ದಾರೆ. ಸರ್ಕಾರದ ನಿರ್ದೇಶನದ ಮೇರೆಗೆ ಸಕ್ಕರೆ ಆಯುಕ್ತರು, ಕೇಂದ್ರ ಸರ್ಕಾರದ ಸಕ್ಕರೆ ನಿಯಂತ್ರಣ ಆದೇಶ ಕಾಯ್ದೆ ಪ್ರಕಾರ ಬೆಳೆಗಾರರಿಗೆ ನಿಗದಿತ ಅವಧಿಯೊಳಗೆ ಬಿಲ್ ಪಾವತಿ ಮಾಡದಿದ್ದರೆ, ವಾರ್ಷಿಕ ಶೇ.15 ಬಡ್ಡಿ ಸೇರಿ ರೈತರ ಖಾತೆಗೆ ಬಿಲ್ ಜಮಾ ಮಾಡಬೇಕು ಎಂದು 24 ಸಕ್ಕರೆ ಕಾರ್ಖಾನೆಗಳಿಗೆ ರಿಕವರಿ ಸರ್ಟಿಫಿಕೇಟ್ ಜಾರಿ ಮಾಡಿದ್ದಾರೆ. ಇದು ಕಾರ್ಖಾನೆಗಳ ಮಾಲೀಕರ ಬೆವರಿಳಿಸುವಂತೆ ಮಾಡಿದೆ.



ಮೊದಲ ಸ್ಥಾನದಲ್ಲಿ ಮುಧೋಳ ಕಾರ್ಖಾನೆ

ಶಾಮನೂರು ಶಿವತಂಕರಪ್ಪ ಒಡೆತನದ ಮುಧೋಳದ ಇಂಡಿಯನ್ ಕೇನ್ ಪಾವರ್ ಕಾರ್ಖಾನೆಯು 17,78,943 ಟನ್ ಕಬ್ಬು ನುರಿಸಿ, 1,72,902 ಟನ್ ಸಕ್ಕರೆ ಉತ್ಪಾದಿಸುವ ಮೂಲಕ ನಂ.1 ಸ್ಥಾನದಲ್ಲಿದೆ. ಡಾ. ಪ್ರಭಾಕರ ಕೋರೆ ಒಡೆತನದಲ್ಲಿರುವ ರಾಯಭಾಗದ ಶಿವಶಕ್ತಿ ಶುಗರ್ಸ್ 15,64,448 ಟನ್ ಕಬ್ಬು ನುರಿಸಿ, 1,72,558 ಟನ್ ಸಕ್ಕರೆ ಉತ್ಪಾದಿಸಿ 2ನೇ ಸ್ಥಾನದಲ್ಲಿದೆ. ಸಕ್ಕರೆ ಇಳುವರಿ ಕಾರ್ಖಾನೆಯಿಂದ ಕಾರ್ಖಾನೆಗೆ ಬೇರೆಯಾಗಿದ್ದರೂ, ಸರಾಸರಿ ಇಳುವರಿ ಶೇ.9.15 ಇದೆ. ಚಿಕ್ಕೋಡಿ ತಾಲೂಕಿನ ವೆಂಕಟೇಶ್ವರ ಪಾವರ್ ಪ್ರಾಜೆಕ್ಟ್ ಕಾರ್ಖಾನೆಯ ಇಳುವರಿ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಅಂದರೆ ಶೇ.11.70 ಇದೆ ಎಂದು ಸಕ್ಕರೆ ಇಲಾಖೆಯ ಲಭ್ಯ ಅಂಕಿ-ಅಂಶಗಳಿಂದ ಬೆಳಕಿಗೆ ಬಂದಿದೆ.

ಸಕ್ಕರೆ ಜಿಲ್ಲೆ ಬೆಳಗಾವಿ ನಂ.1

ರಾಜ್ಯದಲ್ಲಿ 2025ರ ಜ.31ರ ವರೆಗೆ 79 ಸಕ್ಕರೆ ಕಾರ್ಖಾನೆಗಳು 4.31 ಕೋಟಿ ಟನ್ ಕಬ್ಬು ನುರಿಸಿ, 35.13 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ. ಈ ಪೈಕಿ ಬೆಳಗಾವಿಯಲ್ಲಿ ಕಬ್ಬು ನುರಿಸುತ್ತಿರುವ 29 ಸಕ್ಕರೆ ಕಾರ್ಖಾನೆಗಳು 1.67 ಕೋಟಿ ಟನ್ ಕಬ್ಬು ನುರಿಸಿ, 13.93 ಲಕ್ಷ ಟನ್ ಸಕ್ಕರೆ ಉತ್ಪಾದಿಸುವ ಮೂಲಕ ಸಕ್ಕರೆ ಜಿಲ್ಲೆಯಾಗಿರುವ ಬೆಳಗಾವಿ ರಾಜ್ಯಕ್ಕೆ ನಂ.1 ಸ್ಥಾನದಲ್ಲಿದೆ.

ಶೇಕಡ 15.36 ಕಡಿಮೆ

ಉದ್ಯಮ ತಜ್ಞರ ಪ್ರಕಾರ, ಕಡಿಮೆ ಉತ್ಪಾದನೆ ಮತ್ತು ಕಬ್ಬು ನುರಿಸುವ ಸಾಮರ್ಥ್ಯದ ಹೆಚ್ಚಳದಿಂದಾಗಿ ಕಾರ್ಖಾನೆಗಳು ಶೀಘ್ರದಲ್ಲೇ ಕಾರ್ಯನಿರ್ವಹಣೆ ಸ್ಥಗಿತಗೊಳಿಸಲಿವೆ. 2024-25 ಹಂಗಾಮಿನಲ್ಲಿ, ದೇಶದ ಒಟ್ಟು ಸಕ್ಕರೆ ಉತ್ಪಾದನೆ 270 ಲಕ್ಷ ಟನ್‌ಗಳಿಗೆ ತಲುಪುವ ನಿರೀಕ್ಷೆಯಿದೆ. ಹಿಂದಿನ ಹಂಗಾಮಿನಲ್ಲಿ 319 ಲಕ್ಷ ಟನ್‌ಗಳಾಗಿತ್ತು. ಇದರಿಂದ ಈ ಹಂಗಾಮಿನ ಸಕ್ಕರೆ ಉತ್ಪಾದನೆ ಹಿಂದಿನ ಹಂಗಾಮಿಗಿಂತ ಸುಮಾರು ಶೇ.15.36 ಕಡಿಮೆಯಾಗಿದೆ ಎಂದು ರಾಷ್ಟ್ರೀಯ ಸಹಕಾರ ಮಹಾಮಂಡಳಿ ತಿಳಿಸಿದೆ.